ಪಿ. ಜಯವಂತ ಪೈ, ಕುಂದಾಪುರ
◆ ಉಳುವಾ ಯೋಗಿಯ ನೋಡಲ್ಲಿ ಹೋಗಿ ಅಳುವಾ ಯೋಗಿಯ ನೋಡಲ್ಲಿ ಆಗಿದೆಯಲ್ಲಾ...?



ಕೊಂಚ ಬದಲಾವಣೆ ಇದೆ; ಅಳುವ ಕುತಂತ್ರಿಯ ನೋಡಲ್ಲಿ!

ಪಿ.ಎನ್. ಶ್ರೀವತ್ಸ, ಬೆಂಗಳೂರು
◆ ಚಿಂತೆ, ಇದರ ನಿಜವಾದ ಅರ್ಥ?
ಎಂತಹ ದೊಣಪನನ್ನೂ ಸಣ್ಣಗಾಗಿಸುವ ಸ್ಲಿಮ್ಮಿಂಗ್ ಏಜೆಂಟ್.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
◆ ಮನುಷ್ಯನ ರೋಗಗಳಲ್ಲೇ ಅತ್ಯಂತ ದೊಡ್ಡ ರೋಗ ಯಾವುದು?
ಅತೃಪ್ತಿ.

ಎಸ್.ಎನ್. ಮಹಾಬಲರಾವ್, ಎನ್ನಾರ್‌ಪುರ
◆ ಚಪ್ಪಲಿಯ ಜಾಗದಲ್ಲಿ ಚಪ್ಪಲಿ ಇಲ್ಲವಲ್ಲಾ....?



ಮೆದುಳಿರಬೇಕಾದಲ್ಲೇ ಖಾಲಿ ಇರುವಾಗ ಇದೇನು ಮಹಾ ಬಿಡಿ.

ಗಂಜಾಂ ನಾಗರಾಜ್, ಮೈಸೂರು
◆ ಸಕ್ಕರೆ ಕಾಯಿಲೆ ಏಕೆ ಸ್ವಭಾವದಲ್ಲಿ ಸಕ್ಕರೆಯಂತೆ ಇರೋಲ್ಲ?
ಇರುತ್ತದಲ್ಲ; ಅದರಿಂದ ಕಬ್ಬು ಹಿಂಡಿ ಹಿಪ್ಪೆಯಾಗುತ್ತದೆ; ಇದರಿಂದ ಮನುಜ ಹಿಂಡಿ ಹಿಪ್ಪೆಯಾಗುತ್ತಾನೆ.

ವಿ. ಹಮೀದ್, ವಿಟ್ಲ
◆ ಗಗನಸಖಿಯನ್ನು ಲವ್ ಮಾಡುವಾಸೆ. ನಿಮ್ಮ ಕಿವಿಮಾತೇನು?
ಎಚ್ಚರ. ಹವಾಮಾನ ಹದಗೆಟ್ಟರೆ ಕ್ರ್ಯಾಷ್ ಆಗುವ ಸಾಧ್ಯತೆಗಳಿವೆ.

ಫಾಲನೇತ್ರ ಸಜ್ಜನ, ಶಿರಸಿ
◆ ಪುರಾಣ ಇತಿಹಾಸ ಎನಿಸುವುದು ಯಾವಾಗ?
ಅದೇ ಧೃತರಾಷ್ಟ್ರ, ಅದೇ ಪುತ್ರವಾತ್ಸಲ್ಯ, ಅದೇ ಶಕುನಿ, ಅದೇ ಕುರುಬುದ್ಧಿ ಮರುಕಳಿಸಿದಾಗ.

ಬಾ.ರಂ. ಸುರೇಶ್, ಶಿವಮೊಗ್ಗ
◆ ದಾರಿ ತಪ್ಪಿದ ಮಗನಿಗೂ, ದಾರಿ ತಪ್ಪಿದ ಮಗಳಿಗೂ ತಮ್ಮ ಹಿತವಚನವೇನು ಶಿವಾ?
ಲಭ್ಯವಿರುವ ಉತ್ತಮ ಜಿಪಿಎಸ್ (G–guidance; P–protection; S–sensibility) ಬಳಸಿರಿ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
◆ ರಾಜಕೀಯ ಕಲಿಯಲು ಶಾಲೆ ಎಲ್ಲಿದೆ?
ಬೆಂಗಳೂರಿನ ಹೂಹೊಕ್ಕಳಪುರದಲ್ಲಿ. ಆದರೆ ಪ್ರವೇಶ ಬಂಧುಗಳಿಗೆ ಮಾತ್ರವಾದ್ದರಿಂದ ಏಕಲವ್ಯನಂತೆ ಕಲಿಯಿರಿ.

ದಿನೇಶ್ ಗುಡ್ಡದೂರು
◆ ಪ್ರಸ್ತುತ ರಾಜಕೀಯವು ರಾಮರಾಜ್ಯವೋ, ರಾವಣರಾಜ್ಯವೋ?
ಎರಡೂ ಅಲ್ಲ; ಶುದ್ಧ ಕಪಿಗಳು, ಕರಡಿಗಳಿರುವ ಕಿಷ್ಕಿಂಧೆ.

ಕೆ.ಪಿ. ರಾಮಗುಂಡಿ ಬೈಲಹೊಂಗಲ
◆ ಮನಸ್ಸಿಗಿಂತ ವೇಗವಾದುದು ಯಾವುದು?
ಮನವನ್ನೇ ಮೀರಿ ಚಲಿಸಿ ಆವರಿಸುವ ಚಿಂತೆ, ಭಯ.

ಎ.ಕೆ. ಪಟ್ಟಾಭಿ ಬೆಂಗಳೂರು
◆ ಸುರಕ್ಷಿತ ಸಂಸಾರಕ್ಕೆ ಒಬ್ಬ ಗಂಡ, ಹೆಚ್ಚು ಹೆಂಡಂದಿರು ಸರಿಯೋ; ಒಬ್ಬ ಹೆಂಡತಿ, ಹೆಚ್ಚು ಗಂಡಂದಿರು ಸರಿಯೋ?
ನಿಮಗೆ ಮನೆಯಲ್ಲಿ ರಾಮಾಯಣ ಬೇಕಿದ್ದರೆ ಆಯ್ಕೆ 1, ಕುರುಕ್ಷೇತ್ರ ಬೇಕಿದ್ದರೆ ಆಯ್ಕೆ 2.

ಕುಮಾರ ಚಲವಾದಿ, ಹಾಸನ
◆ ಗಂಡು ಹೆಣ್ಣಿನ ಕೈಗೊಂಬೆಯಾಗುವುದು ಯಾವಾಗ?
ಹುಟ್ಟುತ್ತಲೇ ಅಮ್ಮನ ಕೈಗೊಂಬೆ; ನಂತರ ಓನರ್‌ಶಿಪ್ ಚೇಂಜ್ ಅಷ್ಟೆ.

## ಬಹುಮಾನಿತ ಪ್ರಶ್ನೆ

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ
◆ ಮದ್ಯವ್ಯಸನಿಗಳಿಗೂ, ವಾಟ್ಸ್ಯಾಪ್ ಪೀಡಿತರಿಗೂ ಏನು ವ್ಯತ್ಯಾಸ?
ಕೊಂಚಷ್ಟೇ ವ್ಯತ್ಯಾಸ; ಅವರದು ಕಾಲು ತಪ್ಪುತ್ತದೆ, ಇವರದು ಕಾಲ ತಪ್ಪುತ್ತದೆ.

ರವಿಕಾಂತ ಎಂ.ಕೆ., ತುಮಕೂರು
◆ ಕೊಯ್ಲಿ ಹೊಡೆಯುವ ಸ್ಟ್ರೋಕ್‌ಗೂ, ರಾಜಕಾರಣಿಗಳು ಕೊಡುವ ಮಾಸ್ಟರ್ ಸ್ಟ್ರೋಕ್‌ಗೂ ಇರುವ ವ್ಯತ್ಯಾಸವೇನು?
ಕೊಯ್ಲಿಯ ಸ್ಟ್ರೋಕ್‌ಗೆ ಚೆಂಡು ಗಡಿ ದಾಟುತ್ತದೆ, ರಾಜಕಾರಣಿಯ ಸ್ಟ್ರೋಕ್‌ಗೆ ಫಂಡು ಗಡಿ ದಾಟುತ್ತದೆ.

ಎಚ್.ಆರ್. ದೇಸಾಯಿ, ರಾಯಚೂರು
◆ ಬಂಗಾರ ಮಾರುವವನು ಶ್ರೀಮಂತನೋ, ಬಂಗಾರ ಕೊಳ್ಳುವವನು ಶ್ರೀಮಂತನೋ?
ಇಬ್ಬರೂ ಅಲ್ಲ; ಬಂಗಾರದಂತಹ ಜೀವನ ನಡೆಸುವವನೇ ಶ್ರೀಮಂತ.

ಟಿ.ಎಂ. ಮಾನಪ್ಪ, ಶಿವಮೊಗ್ಗ
◆ ಮೊದಲ ರಾತ್ರಿಗೂ, ಕೊನೆಯ ರಾತ್ರಿಗೂ ಇರುವ ವ್ಯತ್ಯಾಸವೇನು?



ಒಂದೇ ಅಕ್ಷರ ವ್ಯತ್ಯಾಸ. ಮೊದಲ ರಾತ್ರಿ close. ಕೊನೆಯ ರಾತ್ರಿ closed.

ಭಾರತಿ ಮಾನಗೆ, ಹೊನ್ನಾವರ
◆ ಭಗವಂತನ ಬಹು ರೂಪಗಳಲ್ಲಿ ಅನ್ನವೂ ಒಂದು. ಏಕೆ?
ಜೀವಕ್ಕೆ ಬತ್ತದ ಪುಷ್ಟಿ ನೀಡುತ್ತದಲ್ಲ.

ಸುಂದರ್, ಬೆಂಗಳೂರು
◆ ಸಾಧಕರಿಗೆ ಆಯುಷ್ಯ ಕಡಿಮೆ; ಬಾಧಕರಿಗೆ ಹೆಚ್ಚು. ಏಕೆ?
ಏಕೆಂದರೆ ಸಾಧಕ ಮೈಲಿಗಲ್ಲುಟ್ಟಲೆ ಓಡಿ ಸವೆಯುವ ಟೈರು; ಬಾಧಕ ಒತ್ತಿದಷ್ಟೂ ಬಡಿದುಕೊಳ್ಳುವ ಹಾರ್ನ್.

■ ರಾಮ್